1. ಇವರಲ್ಲಿ ಕನ್ನಡದ ಮೊದಲ ರಾಷ್ಟ್ರಕವಿ ಯಾರು?
   A) ಕುವೆಂಪು B) ಶಿವರಾಮ ಕಾರಂತ
   C) ಎಂ.ಗೋವಿಂದ ಪೈ D) ಜಿ.ಎಸ್.ಶಿವರುದ್ರಪ್ಪ

2. ಕನ್ನಡಕ್ಕೆ ಎಂಟನೆಯ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಸಾಹಿತಿ
   A) ಯು.ಆರ್.ಅನಂತಮೂರ್ತಿ B) ಚಂದ್ರಶೇಖರ ಕಂಬಾರ
   C) ಚಂದ್ರಶೇಖರ ಪಾಟೀಲ D) ಗಿರೀಶ್ ಕಾರ್ನಾಡ್

3. ಬಿ.ಎಂ.ಶ್ರೀ.ಅವರ 'ಅಶ್ವತ್ಥಾಮನ್' ನಾಟಕಕ್ಕೆ ಪ್ರೇರಣೆ–ಪ್ರಭಾವ ನೀಡಿದ ಕೃತಿ
   A) ದಿ ಟೆಂಪೆಸ್ಟ್ B) ತಾರ್ತೂಫ್
   C) ಏಜಾಕ್ಸ್ D) ಮ್ಯಾಕ್‌ಬೆತ್

4. 'ಚಂದ್ರಗಿರಿಯ ತೀರದಲ್ಲಿ' ಇದು ಯಾರ ಕೃತಿ?
   A) ಸಾರಾ ಅಬೂಬಕರ್ B) ವೀಣಾ
   C) ವೈದೇಹಿ D) ಗೀತಾ ನಾಗಭೂಷಣ್

5. ಎಸ್.ಎಲ್.ಭೈರಪ್ಪ ಅವರ ಯಾವ ಕೃತಿಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿ ಲಭಿಸಿದೆ?
   A) ಪರ್ವ B) ಮಂದ್ರ
   C) ಅಂಚು D) ದಾಟು

6. 'ಭಾರತ ಸಿಂಧುರಶ್ಮಿ' ಯಾವ ಪ್ರಕಾರಕ್ಕೆ ಸೇರಿದ ಕೃತಿ?
   A) ಖಂಡಕಾವ್ಯ B) ಲಘುಕಾವ್ಯ
   C) ಕಥನಕಾವ್ಯ D) ಮಹಾಕಾವ್ಯ

7. 'ಇಳಿದು ಬಾ ತಾಯಿ ಇಳಿದು ಬಾ ಹರನ ಜಡೆಯಿಂದ ಹರಿಯ ಅಡಿಯಿಂದ ಋಷಿಯ ತೊಡೆಯಿಂದ ನುಸುಳಿ ಬಾ' ಈ ಸಾಲುಗಳು ಬರುವ ಪ್ರಸಿದ್ಧ ಕವನ ಸಂಕಲನ?
   A) ನಾದಲೀಲೆ B) ನಾಕುತಂತಿ
   C) ಗರಿ D) ಗಂಗಾವತರಣ

8. 'ಮೂಕಜ್ಜಿಯ ಕನಸುಗಳು' ಕೃತಿಯ ಕರ್ತೃ
   A) ಪಂಜೆ ಮಂಗೇಶರಾವ್ B) ಶ್ರೀ ಕೃಷ್ಣ ಆಲನಹಳ್ಳಿ
   C) ರಾವ್ ಬಹದ್ದೂರ್ D) ಶಿವರಾಮ ಕಾರಂತ

9. ‘ಕತ್ತೆ ಮತ್ತು ಧರ್ಮ’ ಕವನವನ್ನು ಬರೆದಿರುವ ಕವಿ ಯಾರು?

A) ಸಿದ್ಧಲಿಂಗಯ್ಯ B) ಜಿ.ಪಿ.ರಾಜರತ್ನಂ

C) ಕೆ.ಎಸ್.ನಿಸಾರ್ ಅಹಮ್ಮದ್ D) ಶ್ರೀನಿವಾಸ

10. ಇದು ಗುಲ್ವಾಡಿ ವೆಂಕಟರಾಯರ ಕಾದಂಬರಿ

A) ಕಾಡು B) ಭಾಗೀರಥಿ C) ಇಂದಿರಾಬಾಯಿ D) ವಾಗ್ದೇವಿ

11. ಹರಿಹರನ ‘ಗಿರಿಜಾ ಕಲ್ಯಾಣ’ ಯಾವ ಪ್ರಕಾರಕ್ಕೆ ಸೇರಿದ ಕೃತಿ?

A) ಚಂಪೂ B) ವಚನ C) ರಗಳೆ D) ಷಟ್ಪದಿ

12. ‘ಕೂಡಲ ಸಂಗಮದೇವಾ’ ಇದು ಯಾರ ವಚನಗಳ ಅಂಕಿತ?

A) ಸಿದ್ಧರಾಮ B) ದೇವರ ದಾಸಿಮಯ್ಯ

C) ಅಲ್ಲಮ ಪ್ರಭು D) ಬಸವಣ್ಣ

13. ‘ಕತೆಯಾದಳು ಹುಡುಗಿ’ ಇದು ಯಾರ ಕಥಾಸಂಕಲನ?

A) ಯು.ಆರ್.ಅನಂತಮೂರ್ತಿ B) ಯಶವಂತ ಚಿತ್ತಾಲ

C) ಕುಂ.ವೀರಭದ್ರಪ್ಪ D) ಮಾಸ್ತಿ ವೆಂಕಟೇಶ ಅಯ್ಯಂಗಾರ್

14. ‘ಪಿ.ನರಸಿಂಗರಾವ್’ ಅವರ ಕಾವ್ಯನಾಮ

A) ರಸಿಕರಂಗ B) ಶ್ರೀರಂಗ C) ಪರ್ವತವಾಣಿ D) ವೈದೇಹಿ

15. ‘ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು?’–ಈ ಸಾಲು ಬರುವ ಕವನ ಸಂಕಲನ?

A) ಕಲಾಸುಂದರಿ B) ಪತ್ರಪುಷ್ಪ

C) ಕಟ್ಟುವೆವು ನಾವು D) ಸಾವಿರಾರು ನದಿಗಳು

16. ಸರಿಯಾದುದನ್ನು ಗುರುತಿಸಿ:

A) ಮಂಕ್ಕುತಿಮ್ಮನ ಕಗ್ಗ–ಡಿ.ವಿ.ಜಿ B) ಯುಗಸಂಧ್ಯಾ–ಅ.ನ.ಕೃ

C) ಇಂಗ್ಲಿಷ್ ಗೀತಗಳು–ತೀ.ನಂ.ಶ್ರೀ D) ಮೈಸೂರು ಮಲ್ಲಿಗೆ–ಪು.ತಿ.ನ

17. ‘ಬೆಟ್ಟಕ್ಕೆ ಚಳಿಯಾದೊಡೆ ಏನ ಹೊದಿಸುವರಯ್ಯಾ’–ಇದು ಯಾರ ವಚನ?

A) ಚೆನ್ನಬಸವಣ್ಣ B) ಬಸವಣ್ಣ

C) ಅಲ್ಲಮ ಪ್ರಭು D) ಅಕ್ಕಮಹಾದೇವಿ

18. 'ಬೆಕ್ಕಿನ ಕಣ್ಣು' ಕಾದಂಬರಿಯ ಲೇಖಕಿ ಯಾರು?

A) ಎಂ.ಎಸ್.ವೇದಾ B) ಎಂ.ಕೆ.ಇಂದಿರಾ

C) ಅನುಪಮ ನಿರಂಜನ D) ತ್ರಿವೇಣಿ

19. 'ತಾಳಿಕಟ್ಟೋಕ್ಕೂಲೀನೆ'–ಈ ನಾಟಕದ ಕರ್ತೃ

A) ಗಿರೀಶ್ ಕಾರ್ನಾಡ್ B) ಶ್ರೀರಂಗ

C) ಟಿ.ಪಿ.ಕೈಲಾಸಂ D) ಚದುರಂಗ

20. 'ದುರ್ಗಾಸ್ತಮಾನ' ಯಾವ ಪ್ರಕಾರಕ್ಕೆ ಸೇರಿದ ಕಾದಂಬರಿ?

A) ಐತಿಹಾಸಿಕ B) ಸಾಮಾಜಿಕ C) ಪೌರಾಣಿಕ D) ಪತ್ತೆದಾರಿ

21. 'ಅಗ್ನಿ ಮತ್ತು ಮಳೆ' ನಾಟಕದ ವಸ್ತುವಿಗೆ ಮೂಲ

A) ಭಾಗವತ B) ಮಹಾಭಾರತ

C) ರಾಮಾಯಣ D) ಮಹಾಪುರಾಣ

22. ವೃಷಭನಾಥನ ಭವಾವಳಿಗಳ ಚಿತ್ರಣ ಬರುವ ಕೃತಿ

A) ಶಾಂತಿ ಪುರಾಣ B) ಚಂದ್ರಪ್ರಭ ಪುರಾಣ

C) ಚಾವುಂಡರಾಯ ಪುರಾಣ D) ಆದಿಪುರಾಣ

23. 'ಗದಾಯುದ್ಧ' ಕಾವ್ಯದ ನಾಯಕ

A) ಕರ್ಣ B) ಅರ್ಜುನ C) ದುರ್ಯೋಧನ D) ಭೀಮ

24. ಇವರಲ್ಲಿ ಕವಿಚಕ್ರವರ್ತಿಗಳು ಯಾರು?

A) ಪಂಪ ಪೊನ್ನ ರನ್ನ B) ಪಂಪ ರನ್ನ ಜನ್ನ

C) ಪಂಪ ಪೊನ್ನ ಜನ್ನ D) ಪೊನ್ನ ರನ್ನ ಜನ್ನ

25. ಕನ್ನಡದ ಮೊತ್ತಮೊದಲ ಉಪಲಬ್ಧ ಗ್ರಂಥ

A) ವಡ್ಡಾರಾಧನೆ B) ಲೀಲಾವತಿ ಪ್ರಬಂಧ

C) ಕವಿರಾಜಮಾರ್ಗ D) ಕಬ್ಬಿಗರ ಕಾವ

26. ಇವರುಗಳಲ್ಲಿ ಜೈನ ಕವಿಗಳು ಯಾರು?

a. ನಾಗಚಂದ್ರ b. ನೇಮಿಚಂದ್ರ c. ೧ ನೆಯ ನಾಗವರ್ಮ d. ಕರ್ಣಪಾರ್ಯ

ಸರಿಯಾದ ಉತ್ತರ ಗುರುತಿಸಿ:

A) a, b ಮತ್ತು c B) a, b ಮತ್ತು d

C) b, c ಮತ್ತು d D) a ಮತ್ತು b

27. ‘ಚಿಂತಾಮಣಿಯಲ್ಲಿ ಕಂಡ ಮುಖ’ ಈ ಕವಿತೆಯ ಕರ್ತೃ

A) ಬಿ.ಸಿ.ರಾಮಚಂದ್ರ ಶರ್ಮ
B) ವಿನಾಯಕ
C) ಎಂ.ಗೋಪಾಲಕೃಷ್ಣ ಅಡಿಗ
D) ಬಿ.ಆರ್.ಲಕ್ಷ್ಮಣರಾವ್

28. ಕುವೆಂಪು ಅವರ ‘ರಾಮಾಯಣ ದರ್ಶನಂ’ ಮಹಾಕಾವ್ಯದಲ್ಲಿ ಬಳಕೆಯಾಗಿರುವ ಛಂದಸ್ಸು

A) ಮಹಾಛಂದಸ್ಸು
B) ಸಾನೆಟ್
C) ಅಂಶಛಂದಸ್ಸು
D) ಮುಕ್ತ ಛಂಧಸ್ಸು

29. ‘ಮುದ್ದಣ – ಮನೋರಮೆ’ಯರ ಸಲ್ಲಾಪ ಬರುವ ಕೃತಿ

A) ಅದ್ಭುತ ರಾಮಾಯಣ
B) ಶೇಷ ರಾಮಾಯಣ
C) ರಾಮ ಪಟ್ಟಾಭಿಷೇಕ
D) ರಾಮಾಶ್ವಮೇಧ

30. ಇವುಗಳಲ್ಲಿ ಸರಿಯಾದ ಉತ್ತರ ಗುರುತಿಸಿ.

A) ನಂಜುಂಡ–ಮುದ್ರಾಮಂಜೂಷ
B) ಚಾಮರಸ–ಪ್ರಭುಲಿಂಗ ಲೀಲೆ
C) ದುರ್ಗಸಿಂಹ–ಮೋಹನ ತರಂಗಿಣಿ
D) ನಾಗಚಂದ್ರ–ವರ್ಧಮಾನ ಪುರಾಣ

31. ಕೇಶಿರಾಜನ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿವೆ?

A) 47
B) 51
C) 49
D) 50

32. ‘ಹೇರಡವಿ’–ಇದು ಯಾವ ಸಮಾಸ?

A) ಕರ್ಮಧಾರೆಯ ಸಮಾಸ
B) ಬಹುವ್ರೀಹಿ ಸಮಾಸ
C) ಅಂಶಿ ಸಮಾಸ
D) ಕ್ರಿಯಾ ಸಮಾಸ

33. ‘ದಿಗಿಲನೆ’–ಎಂಬುದು ಯಾವ ಅವ್ಯಯ?

A) ಭಾವಸೂಚಕ
B) ಸಂಬಂಧಾರ್ಥಕ
C) ಅನುಕರಣ
D) ಕೃದಂತ

34. ಕ್ >ಚ್ ಆಗುವ ಪ್ರಕ್ರಿಯೆಯ ಹೆಸರು

A) ತಾಲವ್ಯೀಕರಣ
B) ಕಂಠ್ಯೀಕರಣ
C) ಪರಿಹಾರೀಕರಣ
D) ದೀರ್ಘೀಕರಣ

35. ಪಂಚದ್ರಾವಿಡ ಭಾಷೆಗಳಲ್ಲಿ ಇತ್ತೀಚಿನವರೆಗೂ ಸ್ವತಂತ್ರ ಲಿಪಿ ಇಲ್ಲದ ಭಾಷೆ

A) ತುಳು
B) ಕನ್ನಡ
C) ಮಲೆಯಾಳಂ
D) ತಮಿಳು

36. ‘ A Comparative Grammar of Dravidian Languages’ ಕೃತಿಯ ಲೇಖಕರು

A) ಟಿ.ಬರೋ B) ಎಂ.ಬಿ. ಎಮಿನೋ

C) ಫ್ರಾನ್ಸಿಸ್ ಎಲ್ಲಿಸ್ D) ರಾಬರ್ಟ್ ಕಾಲ್ಡ್‌ವೆಲ್

37. ಇವುಗಳಲ್ಲಿ ಮಧ್ಯದ್ರಾವಿಡ ಭಾಷೆ ಯಾವುದು?

A) ಬ್ರಾಹೂಈ B) ತೆಲುಗು C) ಕೊಲಾಮಿ D) ತೋದ

38. ‘ಜಬರ್ದಸ್ತ್’ –ಇದು ಯಾವ ಭಾಷೆಯ ಪದ?

A) ಹಿಂದಿ B) ಇಂಗ್ಲಿಷ್

C) ಪೋರ್ಚುಗೀಸ್ D) ಪರ್ಷಿಯನ್

39. ನಾಮಪದದ ಬದಲಿಗೆ ಸೂಚಿಸುವ ಪದಗಳಿಗೆ ಏನೆಂದು ಕರೆಯುತ್ತೇವೆ?

A) ಸರ್ವನಾಮ B) ಭಾವನಾಮ

C) ರೂಢನಾಮ D) ಸಂಖ್ಯಾವಾಚಕ ನಾಮ

40. ‘ಛಂದೋಂಬುಧಿ’–ಈ ಗ್ರಂಥದ ಕರ್ತೃ

A) ಈಶ್ವರ ಕವಿ B) ೧ನೆಯ ನಾಗವರ್ಮ

C) ೨ನೆಯ ನಾಗವರ್ಮ D) ಗುಣಚಂದ್ರ

41. ‘ಗದಬ’ ಭಾಷೆಯನ್ನು ಆಡುವ ಜನ ಇರುವ ಪ್ರದೇಶ

A) ಆಂಧ್ರಪ್ರದೇಶ B) ನೀಲಗಿರಿ ಪರ್ವತ

C) ಮಧ್ಯಪ್ರದೇಶ D) ಒರಿಸ್ಸಾ–ಕೊರಪುಟ್

42. ‘ಕರ್ನಾಟಕ ಶಬ್ದಾನುಶಾಸನಂ’ ಯಾವ ಭಾಷೆಯಲ್ಲಿ ರಚಿತವಾಗಿರುವ ಕನ್ನಡ ವ್ಯಾಕರಣ ಗ್ರಂಥ?

A) ಪ್ರಾಕೃತ B) ಸಂಸ್ಕೃತ

C) ಕನ್ನಡ D) ಅರ್ಧಮಾಗಧಿ

43. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ:

A) ವಾಕ್ಯಂ ರಸಾತ್ಮಕಂ ಕಾವ್ಯಂ – ದಂಡಿ

B) ರೀತಿರಾತ್ಮಾ ಕಾವ್ಯಸ್ಯ – ವಾಮನ

C) ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ_ ಭಾಮಹ

D) ಕಾವ್ಯಾಸಾತ್ಮ ಧ್ವನಿಃ –ಅಭಿನವ ಗುಪ್ತ

44. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ

A) ಪಾಶ್ಚಾತ್ಯ ಕಾವ್ಯಮೀಮಾಂಸೆ – ವಿ.ಎಂ.ಇನಾಂದಾರ್

B) ಕಾವ್ಯಾರ್ಥ ಚಿಂತನ – ಜಿ.ಎಸ್.ಶಿವರುದ್ರಪ್ಪ

C) ತೌಲನಿಕ ಕಾವ್ಯಮೀಮಾಂಸೆ – ತೀ.ನಂ.ಶ್ರೀಕಂಠಯ್ಯ

D) ಕಾವ್ಯಮೀಮಾಂಸೆ – ರಾಜಶೇಖರ

45. 'ಕೆಥಾರ್ಸಿಸ್' ಸಿದ್ಧಾಂತದ ಪ್ರತಿಪಾದಕ

A) ಪ್ಲೇಟೋ  B) ಹೋರೇಸ್

C) ಲಾಂಜೈನಸ್  D) ಅರಿಸ್ಟಾಟಲ್

46. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

A) Intuition and Expression – ಬೆನೆಡಿಟ್ಟೋ ಕ್ರೋಚೆ

B) Poetic Image – ಷೆಲ್ಲಿ

C) Principles of Literary Criticism – ವರ್ಡ್ಸ್‌ವರ್ತ್

D) On the Sublime – ಎಡ್ವರ್ಡ್ ಬುಲ್ಲೊ

47. ವೀರ ರಸದ ಸ್ಥಾಯೀಭಾವ

A) ರೌದ್ರ  B) ಉತ್ಸಾಹ  C) ವಿಸ್ಮಯ  D) ರತಿ

48. ಶಾಂತರಸದ ಮೊತ್ತಮೊದಲ ಪ್ರತಿಪಾದಕ ಯಾರು?

A) ರುದ್ರಟ  B) ಭರತ

C) ಅಪ್ಪಯ್ಯ ದೀಕ್ಷಿತ  D) ಉದ್ಭಟ

49. 'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಈ ಕೀರ್ತನೆಯ ಕರ್ತೃ

A) ಜಗನ್ನಾಥದಾಸರು  B) ಪುರಂದರದಾಸರು

C) ಕನಕದಾಸರು  D) ಶ್ರೀಪಾದರಾಯರು

50. ಅನುಕ್ರಮದ ಮಾದರಿ: ಕಾಲಾನುಕ್ರಮದ ರೀತ್ಯಾ ಸಮರ್ಪಕವಾದುದನ್ನು ಗುರುತಿಸಿ.

A) ಅಜಿತಪುರಾಣ, ಮಲ್ಲಿನಾಥಪುರಾಣ, ನೇಮಿನಾಥಪುರಾಣ, ಅನಂತನಾಥಪುರಾಣ

B) ಅನಂತನಾಥಪುರಾಣ, ಅಜಿತಪುರಾಣ, ಮಲ್ಲಿನಾಥಪುರಾಣ, ನೇಮಿನಾಥಪುರಾಣ

C) ನೇಮಿನಾಥಪುರಾಣ, ಅನಂತನಾಥಪುರಾಣ, ಅಜಿತಪುರಾಣ, ಮಲ್ಲಿನಾಥಪುರಾಣ

D) ಮಲ್ಲಿನಾಥಪುರಾಣ, ನೇಮಿನಾಥಪುರಾಣ, ಅನಂತನಾಥಪುರಾಣ, ಅಜಿತಪುರಾಣ

51. ಅನುಕ್ರಮದ ಮಾದರಿ: ಕಾಲಾನುಕ್ರಮದ ರೀತ್ಯಾ ಸಮರ್ಪಕವಾದುದನ್ನು ಗುರುತಿಸಿ.

A) ನಾಕುತಂತಿ, ಚಿಕವೀರರಾಜೇಂದ್ರ, ಮೂಕಜ್ಜಿಯ ಕನಸುಗಳು, ಶ್ರೀರಾಮಾಯಣ ದರ್ಶನಂ

B) ಶ್ರೀರಾಮಾಯಣ ದರ್ಶನಂ, ನಾಕುತಂತಿ, ಚಿಕವೀರರಾಜೇಂದ್ರ, ಮೂಕಜ್ಜಿಯ ಕನಸುಗಳು

C) ಮೂಕಜ್ಜಿಯ ಕನಸುಗಳು, ಶ್ರೀರಾಮಾಯಣ ದರ್ಶನಂ, ನಾಕುತಂತಿ, ಚಿಕವೀರರಾಜೇಂದ್ರ

D) ಶ್ರೀರಾಮಾಯಣ ದರ್ಶನಂ, ನಾಕುತಂತಿ, ಮೂಕಜ್ಜಿಯ ಕನಸುಗಳು, ಚಿಕವೀರರಾಜೇಂದ್ರ

52. ಇವು ನಾಟಕಗಳು:

**a.** ತಲೆದಂಡ **b.** ಒಡಲಾಳ **c.** ಹರಿಜನ್ವಾರ **d.** ಅಹಲ್ಯೆ

ಸರಿಯಾದ ಉತ್ತರ ಯಾವುದು?

A) a ಮತ್ತು b
B) b ಮತ್ತು c
C) a, b ಮತ್ತು d
D) a, c ಮತ್ತು d

53. ಸರಿಯಾದುದನ್ನು ಗುರುತಿಸಿ:

A) ಕಂದ, ರಗಳೆ – ಮಾತ್ರಾ ಛಂದಸ್ಸು

B) ಖ್ಯಾತಕರ್ಣಾಟಕಗಳು – ಅಂಶಛಂದಸ್ಸು

C) ಅಕ್ಕರ, ತ್ರಿಪದಿ – ಅಕ್ಷರ ಛಂದಸ್ಸು

D) ಸಾಂಗತ್ಯ – ಲೌಕಿಕ ಛಂದಸ್ಸು

54. 'ಕನ್ನಡ ಸಾಹಿತ್ಯ ಚರಿತ್ರೆ' ಈ ಕೃತಿಯ ಲೇಖಕರು

A) ಕೆ.ವೆಂಕಟರಾಮಪ್ಪ
B) ತ.ಸು.ಶಾಮರಾಯ
C) ರಂ.ಶ್ರೀ.ಮುಗಳಿ
D) ಟಿ.ವಿ.ವೆಂಕಟಾಚಲ ಶಾಸ್ತ್ರೀ

55. ಸರಿಯಾದುದನ್ನು ಗುರುತಿಸಿ:

A) ಸೌಗಂಧಿಕಾ ಪರಿಣಯ – ಮುಮ್ಮುಡಿ ಕೃಷ್ಣರಾಜ ಒಡೆಯರ್

B) ಶಾಕುಂತಲ – ಎಂ.ಎಲ್. ಶ್ರೀಕಂಠೇಗೌಡ

C) ಶೂರಸೇನ ಚರಿತೆ – ಎ..ಆನಂದರಾಯ

D) ಪ್ರತಾಪರುದ್ರದೇವ – ಬಸವಪ್ಪಶಾಸ್ತ್ರಿ

56. "ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ" ಎಂದು ಹಾಡಿರುವ ಕವಿ

A) ನರಹರಿ ತೀರ್ಥರು
B) ವಿಜಯದಾಸರು
C) ಕನಕದಾಸರು
D) ಪುರಂದರದಾಸರು

57. "ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸೆಕೈವಲ್ಲಿ ಮನವಿಲ್ಲ":
ಈ ಸಾಲಿನ ಪದ್ಯ ಬರುವ ಕೃತಿ

A) ವಿಕ್ರಮಾರ್ಜುನ ವಿಜಯ B) ಸಾಹಸಭೀಮ ವಿಜಯ
C) ಕರ್ಣಾಟ ಭಾರತ ಕಥಾಮಂಜರಿ D) ಕಿರಾತಾರ್ಜುನ ವಿಜಯ

58. "...ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯ್ತು..." ಈ ವಚನದ ಕರ್ತೃ

A) ದೇವರ ದಾಸಿಮಯ್ಯ B) ಅಲ್ಲಮಪ್ರಭು
C) ಅಕ್ಕಮಹಾದೇವಿ D) ಬಸವಣ್ಣ

59. 'ಅಚ್ಛೋದ ಸರೋವರ'ದ ವರ್ಣನೆ ಬರುವ ಕೃತಿ

A) ಪಂಪಭಾರತ B) ಗದಾಯುದ್ಧ
C) ಕರ್ಣಾಟಕ ಕಾದಂಬರಿ D) ಹರಿಶ್ಚಂದ್ರ ಕಾವ್ಯ

60. 'ನಾಟ್ಯಶಾಸ್ತ್ರ' ದ ಕರ್ತೃ

A) ಭಟ್ಟತೌತ B) ಭರತ
C) ಧನಂಜಯ D) ವಿಶ್ವನಾಥ

61. ಈ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

A) ಬಸವ ಪುರಾಣ – ತಿರುಮಲಾರ್ಯ
B) ಪಂಚತಂತ್ರ – ಕುಮಾರ ವಾಲ್ಮೀಕಿ
C) ಹದಿಬದೆಯ ಧರ್ಮ – ಹೆಳವನ ಕಟ್ಟೆ ಗಿರಿಯಮ್ಮ
D) ಮಿತ್ರಾವಿಂದಾ ಗೋವಿಂದ – ಸಿಂಗರಾರ್ಯ

62. ಇವರುಗಳಲ್ಲಿ ಪ್ರಗತಿಶೀಲ ಸಾಹಿತ್ಯ ಪಂಥಕ್ಕೆ ಸೇರಿದವರು

a. ಕುಂ.ವೀರಭದ್ರಪ್ಪ b. ಅ.ನ.ಕೃ c. ನಿರಂಜನ d. ರಾವ್ ಬಹದ್ದೂರ್

A) a ಮತ್ತು b B) c ಮತ್ತು d
C) b ಮತ್ತು c D) a, b ಮತ್ತು d

63. 'ಮಾಡಿದ' ಎಂಬುದು

A) ವರ್ತಮಾನ ಕೃದಂತ B) ಭೂತ ಕೃದಂತ
C) ನಿಷೇದ ಕೃದಂತ D) ಭವಿಷ್ಯತ್ ಕೃದಂತ

64. ಲಕ್ಷೀಶನ 'ಜೈಮಿನಿ ಭಾರತ' ಯಾವ ಛಂದಸ್ಸಿನಲ್ಲಿ ರಚಿತವಾಗಿದೆ?

A) ಉದ್ದಂಡ ಷಟ್ಪದಿ B) ಭಾಮಿನೀ ಷಟ್ಪದಿ

C) ಕುಸುಮ ಷಟ್ಪದಿ D) ವಾರ್ಧಕ ಷಟ್ಪದಿ

65. ಸಾಂಗತ್ಯದ ಏಳು ಮತ್ತು ಹದಿನಾಲ್ಕನೆಯ ಸ್ಥಾನದಲ್ಲಿ ಬರುವ ಗಣ

A) ಬ್ರಹ್ಮ ಗಣ B) ರುದ್ರ ಗಣ C) ವಿಷ್ಣು ಗಣ D) ಪದ್ಮ ಗಣ

66. "...ಲಘುದ್ವಂದ್ವಂ ಗುರುದ್ವಂದ್ವಂಮಾಗಿರೆ" –

A) ಶಾರ್ದೂಲ ವಿಕ್ರೀಡಿತ B) ಮತ್ತೇಭ ವಿಕ್ರೀಡಿತ

C) ಸ್ರಗ್ಧರಾ ವೃತ್ತ D) ಮಹಾಸ್ರಗ್ಧರಾ ವೃತ್ತ

67. ದ್ರಾವಿಡ ಭಾಷೆಗಳು ಸಂಸ್ಕೃತಜನ್ಯವಲ್ಲ. ಅವು ಕೆಲವಂಶದಲ್ಲಿ ಸಿಥಿಯನ್ ಗುಂಪನ್ನು ಹೋಲುತ್ತವೆ" ಎಂದು ಹೇಳಿದ ವಿದ್ವಾಂಸ

A) ವಿಲಿಯಮ್ಸ್ ಜೋನ್ಸ್ B) ಗ್ರಿಯರ್‌ಸನ್

C) ವಿಲಿಯಮ್ ಬ್ರೈಟ್ D) ರಾಸ್‌ಮಸ್ ರಾಸ್ಕ್

68. ಹಣ್ಣುಹಂಪಲು – ಇದು

A) ಜೋಡಿ ನುಡಿ B) ನುಡಿಗಟ್ಟು C) ನಾಣ್ನುಡಿ D) ದ್ವಿರುಕ್ತಿ

69. ಮಂದಾನಿಲ ರಗಳೆಯ ಗಣಸಂಯೋಜನೆ:

A) 3;3;3;3 B) 5;5;5;5 C) 4;4;4;4 D) 5;4;5;4

70. ಈ ಪದಗಳು ಪರಿಮಾಣ ವಾಚಕಕ್ಕೆ ಉದಾಹರಣೆಯಾಗಿವೆ:

A) ಅಷ್ಟು ಇಷ್ಟು B) ಅದು ಇದು C) ಅಂಥ ಇಂಥ D) ಅಲ್ಲಿ ಇಲ್ಲಿ

71. "A Grammar of Kannada Language"– ಈ ಕೃತಿಯ ಕರ್ತೃ

A) ಬಿ.ಗ್ರೇಟರ್ B) ಜಾನ್ ಮೆಕ್ಕಿರಲ್

C) ರಾಬರ್ಟ್ ಕಾಲ್ಡ್‌ವೆಲ್ D) ಆರ್.ಎಫ್.ಕಿಟ್ಟಲ್

72. 'ಹರನೆಂಬುದೇ ಸತ್ಯ ಸತ್ಯವೆಂಬುದು ಹರನು' ಎಂದು ತನ್ನ ಕಾವ್ಯದ ಮೂಲಕ ಜಗಕೆ ಸಾರಿದ ಕವಿ

A) ಹರಿಹರ B) ರಾಘವಾಂಕ

C) ಆಂಡಯ್ಯ D) ನಯಸೇನ

73. ಜನ್ನನ ಕೃತಿಗಳು ಇವು:

a) ಅನುಭವಾಮೃತ b) ಅನಂತನಾಥ ಪುರಾಣ

c) ಯಶೋಧರ ಚರಿತೆ d) ಅನುಭ ಮುಕುರ

ಇವುಗಳಲ್ಲಿ ಸರಿಯಾದ ಉತ್ತರ:

A) b, c ಮತ್ತು d B) a, b ಮತ್ತು c

C) a, c ಮತ್ತು d D) a, b, c ಮತ್ತು d

74. ಇಂಗ್ಲಿಷಿನ 'ಓಡ್' ಗೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಾಗಿರುವ ಛಂದಸ್ಸು

A) ಸರಳರಗಳೆ B) ಅನಾಗತ

C) ಪ್ರಗಾಥ D) ಅಷ್ಟ ಷಟ್ಪದಿ

75. "ಸಂಶೋಧನೆಯೆನ್ನುವುದು ಜ್ಞಾನದ ದಿಗಂತವನ್ನು ವಿಸ್ತರಿಸುವ ಕಾರ್ಯ" ಹೀಗೆಂದು ಹೇಳಿದವರು

A) ಬರಗೂರು ರಾಮಚಂದ್ರಪ್ಪ B) ಎಂ.ಚಿದಾನಂದಮೂರ್ತಿ

C) ಬಿ.ಸದಾಶಿವ D) ಎಂ.ಎಂ ಕಲಬುರ್ಗಿ

76. ' ಸಂಶೋಧನ ಸ್ವರೂಪ' ಈ ಗ್ರಂಥದ ಲೇಖಕರು

A) ಭರಣಿ B) ಕುಲಕರ್ಣಿ

C) ಬಿ.ವ್ಹಿ.ಶಿರೂರ D) ಕೆ.ಜಿ.ನಾರಾಯಣ ಪ್ರಸಾದ್

77. 'Glossary' ಎಂದರೆ:

A) ಆಧಾರ ಗ್ರಂಥಸೂಚಿ B) ಪಾರಿಭಾಷಿಕ ಪದಸೂಚಿ

C) ಸಾರಲೇಖ D) ಒಪ್ಪೋಲೆ

78. 'ಇಂಡಿಯನ್ ಸ್ಪೇಸ್ ರೀಸರ್ಚ್ ಆರ್ಗನೈಸೇಷನ್'(ಇಸ್ರೋ) ಇರುವ ಸ್ಥಳ

A) ಬೆಂಗಳೂರು B) ಮಂಗಳೂರು

C) ಮೈಸೂರು D) ಗುಲ್ಬರ್ಗಾ

79. ಕನ್ನಡ ನವ್ಯಕಾವ್ಯದ ಮೇಲೆ ಹೆಚ್ಚು ಪ್ರಭಾವ ಬೀರಿರುವ ಇಂಗ್ಲಿಷ್ ಕವಿ ಯಾರು?

A) ವರ್ಡ್ಸ್‌ವರ್ತ್ B) ಟಿ. ಎಸ್. ಎಲಿಯಟ್

C) ಸಫೋಕ್ಲೀಸ್ D) ಕೀಟ್ಸ್

80. ಇದು ಭಾರತದ ಮೊದಲನೆಯ ದಿನಪತ್ರಿಕೆ

A) ನ್ಯಾಷನಲ್ ಹೆರಾಲ್ಡ್ B) ಹಿಂದೂಸ್ಥಾನ್ ಟೈಮ್ಸ್

C) ಟೈಮ್ಸ್ ಆಫ್ ಇಂಡಿಯಾ D) ಹಿಕ್ಕೀಸ್ ಬೆಂಗಾಲ್ ಗೆಜೆಟ್

81. "ಹೆಂಟಿ ಕೈಲಾಡಿ ಕಲ್ಲು...." ಈ ಗಾದೆಗೆ ಯಾವ ಪದ ಸೇರಿದರೆ ಪೂರ್ಣವಾಗುತ್ತದೆ?

A) ಭಾರವಾಯ್ತು B) ದೊಡ್ಡದಾಯ್ತು

C) ಹಗುರವಾಯ್ತು D) ಗಟ್ಟಿಯಾಯ್ತು

82. 'ಕಾವ್ಯಪ್ರಕಾಶ' ಕೃತಿಯ ಕರ್ತೃ

A) ಮಮ್ಮಟ B) ಹೇಮಚಂದ್ರ

C) ಉದಿಯಾದಿತ್ಯ D) ಗೋವಿಂದ

83. ಲಂಡನ್ನಿನಲ್ಲಿ 'ಫೋಕ್‌ಲೋರ್ ಸೊಸೈಟಿ' ಆರಂಭವಾದದ್ದು

A) 1878 ರಲ್ಲಿ B) 1892 ರಲ್ಲಿ

C) 1906 ರಲ್ಲಿ D) 1920 ರಲ್ಲಿ

84. 'The Folk Songs of Southern India' ಕೃತಿಯ ಲೇಖಕರು

A) ಅಬೆ ದುಬೊಅ B) ಜೆ.ಎಫ್.ಫ್ಲೀಟ್

C) ಲೆಫ್ಟಿನೆಂಟ್ ಕರ್ನಲ್ ಮೆಕೆಂಜಿ D) ಚಾರ್ಲ್ಸ್ ಇ ಗೋವರ್

85. 'ಜನಪದ ಮಹಾಭಾರತ' ಮಹಾಕಾವ್ಯದ ಸಂಪಾದಕರು

A) ಬಿ.ಎ.ವಿವೇಕ ರೈ B) ಮುಳಿಯ ತಿಮ್ಮಪ್ಪಯ್ಯ

C) ಕುಕ್ಕಿಲ ಕೃಷ್ಣಭಟ್ D) ಪಿ.ಕೆ.ರಾಜಶೇಖರ

86. 'ಜನಪದ ಅಧ್ಯಯನ' ಕೃತಿಯ ಲೇಖಕರು

A) ದೇ.ಜವರೇಗೌಡ B) ಎಂ.ರಾಮು

C) ಎನ್. ತಪಸ್ವೀಕುಮಾರ್ D) ಸಿ.ಪಿ.ಲಿಂಗಣ್ಣ

87. ಜಾನಪದ ಕ್ಷೇತ್ರಕ್ಕೆ ಮಹಾನ್ ಕೊಡುಗೆ ನೀಡಿದ ಅಮೆರಿಕದ ವಿದ್ವಾಂಸ

A) ಜಾನ್ ವಾರ್ಡನ್ B) ಲೂಯಿಸ್ ಪೌಸ್ಟ್

C) ಸ್ಟಿತ್ ಥಾಂಸನ್ D) ವಾರೆನ್ ರಾಬರ್ಟ್ಸ್

88. 'ಜಾನಪದ ಲೋಕ' ಈ ಸಂಸ್ಥೆಯ ಸ್ಥಾಪಕರು ಯಾರು?

A) ರಾಗೌ B) ಎಚ್.ಎಲ್.ನಾಗೇಗೌಡ

C) ಜೀ.ಶಂ.ಪ D) ಹಾ.ಮಾ.ನಾಯಕ

89. 'ಮಾಡಿ ಮಡಿದವರು' –ಕೃತಿಯ ಲೇಖಕರು

A) ಚದುರಂಗ B) ತ.ರಾ.ಸು

C) ಬಸವರಾಜ ಕಟ್ಟೀಮನಿ D) ಅ.ನ.ಕೃ

90. ಕನ್ನಡ ಪತ್ರಿಕೋದ್ಯಮದ ಮೂಲಪುರುಷರು

A) ಎಂ.ವೆಂಕಟಕೃಷ್ಣಯ್ಯ B) ಕಸ್ತೂರಿ ರಂಗ ಐಯ್ಯಂಗಾರ್

C) ಎನ್.ಸಿ.ಕೇಳ್ಕರ್ D) ಎಸ್.ಸದಾನಂದ

91. 'ಭಾರತೀಯ ಪತ್ರಿಕೋದ್ಯಮ' ಕೃತಿಯ ಕರ್ತೃ

A) ನಾಡಿಗ ಕೃಷ್ಣಮೂರ್ತಿ B) ಕೆ.ವಿ.ನಾಗರಾಜ

C) ಡಿ.ವಿ.ಗುಂಡಪ್ಪ D) ಕೆ.ರಾಮರಾವ್

92. "ಅಟ್ಟದ ಮೇಲೆ ಪುಟ್ಟಕ್ಕ ಕುಂತವ್ಳೆ ಮುಟ್ಟಿದರೆ ಬಾಯ್ ಬಡ್ಕೋತಾಳೆ"–ಈ ಒಗಟಿನ ಉತ್ತರ ಯಾವುದು?

A) ಕುಂಕುಮ B) ಮಡಿಕೆ C) ಕಣ್ಣು D) ಗೆಜ್ಜೆ

93. 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದು ಹೇಳಿದವನು

A) ದಂಡಿ B) ಭಾಮಹ

C) ಮಹಿಮ ಭಟ್ಟ D) ಧನಂಜಯ

94. 'ಸಾಧಾರಣೀಕರಣ' ತತ್ತ್ವದ ಪ್ರತಿಪಾದಕ

A) ಭಟ್ಟನಾಯಕ B) ಭಟ್ಟಲೊಲ್ಲಟ

C) ಶ್ರೀಶಂಕುಕ D) ಅಭಿನವ ಗುಪ್ತ

95. ಧ್ವನಿ ವಿಷಯದಲ್ಲಿ ಬರುವ 'ಲಕ್ಷಣೆ' ಯಲ್ಲಿ ಎಷ್ಟು ಬಗೆ?

A) ನಾಲ್ಕು B) ಮೂರು C) ಒಂದು D) ಎರಡು

96. ‘ಭವನಿಮಜ್ಜನ ಚಾತುರ್ಯ’ ಮತ್ತು ‘ಲಘಿಮಾ ಕೌಶಲ’ –ಈ ಪರಿಭಾಷೆಯನ್ನು ಕನ್ನಡ ಕಾವ್ಯಮೀಮಾಂಸೆಗೆ ಕೊಟ್ಟವರು ಯಾರು?

A) ಪು.ತಿ.ನ B) ಕುವೆಂಪು

C) ಜಿ.ಎಸ್.ಶಿವರುದ್ರಪ್ಪ D) ವಿ.ಕೃ.ಗೋಕಾಕ್

97. ‘ವ್ಯಕ್ತಿತ್ವ ನಿರಸನ’ ಸಿದ್ಧಾಂತದ ಪ್ರತಿಪಾದಕ

A) ಜಾನ್ ಡ್ರೈಡನ್ B) ಎಫ್.ಆರ್.ಲೀವಿಸ್

C) ಟಿ.ಎಸ್.ಎಲಿಯಟ್ D) ಮ್ಯಾಥ್ಯೂ ಆರ್ನಾಲ್ಡ್

98. ‘ವಕ್ರೋಕ್ತಿ ಜೀವಿತ’ ಗ್ರಂಥದ ರಚನೆಕಾರ

A) ರುಯ್ಯಕ B) ಕ್ಷೇಮೇಂದ್ರ C) ಜಗನ್ನಾಥ D) ಕುಂತಕ

99. ‘ಯುಗಧರ್ಮ ಮತ್ತು ಸಾಹಿತ್ಯದರ್ಶನ’ ಈ ಕೃತಿಯ ಲೇಖಕರು

A) ಎಂ.ಎಂ.ಕಲಬುರ್ಗಿ B) ಡಿ.ಆರ್.ನಾಗರಾಜ

C) ಕೀರ್ತಿನಾಥ ಕುರ್ತಕೋಟಿ D) ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

100. ಕನ್ನಡದ ಪ್ರಥಮ ವಾರಪತ್ರಿಕೆ

A) ಕರ್ನಾಟಕ ಪ್ರಕಾಶಿಕಾ B) ವೃತ್ತಾಂತ ಪತ್ರಿಕೆ

C) ಹಿತಬೋಧಿನಿ D) ವೇದಾಂತ ಚಿಂತಾಮಣಿ

101. ‘ಭೋಗ–ಯೋಗ’ದ ಸಮನ್ವಯದ ಚಿತ್ರಣ ಇರುವ ಕೃತಿ

A) ಭೈರವೇಶ್ವರ ಕಾವ್ಯ B) ಭರತೇಶ ವೈಭವ

C) ರಕ್ಷಾಶತಕ D) ಮುಡಿಗೆಯ ಅಷ್ಟಕ

102. ‘ದೊರೆ ಈಡಿಪಸ್’ ನಾಟಕದ ಮೂಲ ಕರ್ತೃ

A) ಯೂರಿಪಿಡೀಸ್ B) ಈಸ್ಕೈಲಸ್

C) ಷೇಕ್ಸ್‌ಪಿಯರ್ D) ಸಾಫೋಕ್ಲಿಸ್

103. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

A) ಮೈಸೂರಿನ ಪ್ರಥಮ ಕನ್ನಡ ದಿನಪತ್ರಿಕೆ – ಮೈಸೂರ್ ಸ್ಟಾರ್

B) ಕನ್ನಡದ ಮೊದಲ ಮಾಸ ಪತ್ರಿಕೆ – ಹಿತಬೋದಿನಿ

C) ಡಿ.ವಿ.ಗುಂಡಪ್ಪನವರು ಸ್ಥಾಪಿಸಿದ ಮೊದಲನೆಯ ವಾರಪತ್ರಿಕೆ– ಸಮಾಚಾರ ಸಂಗ್ರಹ

D) ತಿರುಮಲೆ ತಾತಾಚಾರ್ಯ ಸ್ಥಾಪಿಸಿದ ಪತ್ರಿಕೆ – ತಾಯಿನಾಡು

104. "... ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಈ ವರ್ಣನೆ ಬರುವ ಕೃತಿ

A) ಆದಿಪುರಾಣ
B) ರಾಮಚಂದ್ರಚರಿತ ಪುರಾಣ
C) ವಿಕ್ರಮಾರ್ಜುನ ವಿಜಯ
D) ಮಲ್ಲಿನಾಥ ಪುರಾಣ

105. ಬಿದನೂರಿನ ಇತಿಹಾಸವನ್ನು ಒಳಗೊಂಡು ರಚಿತವಾಗಿರುವ ಕನ್ನಡದ ರುದ್ರ ನಾಟಕ

A) ಶೂರಸೇನ ಚರಿತೆ
B) ರಕ್ತಾಕ್ಷಿ
C) ಬಿರುಗಾಳಿ
D) ಅಂತಿಗೊನೆ

106. ರುದ್ರಭಟ್ಟನ 'ಜಗನ್ನಾಥ ವಿಜಯ' ದಲ್ಲಿ ಎಷ್ಟು ಆಶ್ವಾಸಗಳಿವೆ?

A) ಹದಿನೈದು
B) ಹದಿನಾರು
C) ಹದಿನೇಳು
D) ಹದಿನೆಂಟು

107. "ಪವನಜನಾಸ್ಯಮಲ್ತಿದವನಾನನಮಪ್ಪೊಡೆ ಮಟ್ಟಮಿರ್ದು ನೋಡುವುದೆ ಮದೀಯ ವಕ್ತ್ರಮನೆ ..."ಇದು
ಯಾರು ಯಾರಿಗೆ ಹೇಳಿದ ಮಾತು?

A) ಕೃಷ್ಣ ದುರ್ಯೋಧನನಿಗೆ
B) ದುರ್ಯೋಧನ ಅಶ್ವತ್ಥಾಮನಿಗೆ
C) ಬಲರಾಮ ಭೀಮನಿಗೆ
D) ಧರ್ಮರಾಯ ಕೃಷ್ಣನಿಗೆ

108. 'ಓಜ' – ಎಂದರೆ:

A) ಉಪಾಧ್ಯಾಯ B) ಸೇವಕ C) ನೌಕರ D) ಕಾರಕೂನ

109. 'ಯಕ್ಷಗಾನ'ಕಲೆಗೆ ಪ್ರಸಿದ್ಧವಾದ ಸ್ಥಳ

A) ತುಮಕೂರು B) ದಕ್ಷಿಣ ಕನ್ನಡ C) ಶಿವಮೊಗ್ಗ D) ಮಂಡ್ಯ

110. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಎಲ್ಲಿ ಸ್ಥಾಪನೆಯಾಗಿದೆ?

A) ಹಾವೇರಿ B) ಬಳ್ಳಾರಿ C) ಕೊಪ್ಪಳ D) ಮೈಸೂರು

111. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ?

A) ಕಾವ್ಯ ಸಮರ್ಥನೆ–ಷೆಲ್ಲಿ
B) ಪೊಯಟಿಕ್ಸ್–ಅರಿಸ್ಟಾಟಲ್
C) ಲಿಟರರಿ ಬಯೋಗ್ರಾಫಿಯಾ –ಕೋಲ್‌ರಿಜ್
D) ಸೈಕಿಕಲ್ ಡಿಸ್ಟೆನ್ಸ್ –ಸಾಮ್ಯುಯಲ್ ಜಾನ್ಸನ್

112. ಕನ್ನಡ ಭಾಷೆ ಯಾವ ವರ್ಗಕ್ಕೆ ಸೇರಿದೆ?

A) ಆರ್ಯ B) ದ್ರಾವಿಡ C) ಚೀನಿ D) ಟಿಬೆಟ್

113. 'ಇರುಳ ಭಾಷೆಯನ್ನು ಮೊದಲು ಗುರುತಿಸಿ ಇದೊಂದು ಸ್ವತಂತ್ರ ದ್ರಾವಿಡ ಭಾಷೆ' ಎಂದು ಹೇಳಿದ ವಿದ್ವಾಂಸ

A) ಕಮೀಲ್ ಸ್ವಲೇಬಿಲ್ B) ಎಂ.ಬಿ.ಎಮಿನೋ

C) ಟಿ.ಬರೋ D) ಎಸ್.ಭಟ್ಟಾಚಾರ್ಯ

114. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.

A) ನಟಸಾರ್ವಭೌಮ – ನಿರಂಜನ B) ದೇವರು – ಎ.ಎನ್.ಮೂರ್ತಿರಾವ್

C) ಏಕಲವ್ಯ–ಚದುರಂಗ D) ತಲೆದಂಡ–ಪಿ.ಲಂಕೇಶ್

115. ಇವುಗಳಲ್ಲಿ ಕೆ.ಎಸ್.ನರಸಿಂಹಸ್ವಾಮಿ ಅವರ ಕೃತಿ ಯಾವುದು?

A) ಬಕುಳದ ಹೂವುಗಳು B) ನಾಗನ ಪದಗಳು

C) ಜೀವಧ್ವನಿ D) ತೆರದ ಬಾಗಿಲು

116. "ಕಲ್ಲ ನಾಗರ ಕಂಡಡೆ ಹಾಲನೆರೆಯರಂಬರು ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ". ಈ ವಚನದ ಕರ್ತೃ

A) ಬಸವಣ್ಣ B) ಮಡಿವಾಳ ಮಾಚಯ್ಯ

C) ಆಯ್ದಕ್ಕಿ ಮಾರಯ್ಯ D) ಡೋಹರ ಕಕ್ಕಯ್ಯ

117. ನಾಗವರ್ಮನ ಪ್ರಕಾರ ಅಕ್ಕರದಲ್ಲಿ ಎಷ್ಟು ಬಗೆ?

A) ಮೂರು B) ನಾಲ್ಕು C) ಐದು D) ಆರು

118. ಸರ್ವಜ್ಞನ ವಚನಗಳನ್ನು ಮೊದಲಿಗೆ ಸಂಪಾದಿಸಿ ಕೊಟ್ಟವರು

A) ಎಲ್.ಬಸವರಾಜು B) ಆರ್.ಸಿ.ಹಿರೇಮಠ

C) ಉತ್ತಂಗಿ ಚೆನ್ನಪ್ಪ D) ಫ.ಗು.ಹಳಕಟ್ಟಿ

119. ಕುವೆಂಪು ಅವರ 'ಚಿತ್ರಾಂಗದ'ಕಾವ್ಯದ ಮೇಲೆ ಪ್ರಭಾವ ಬೀರಿರುವ ಭಾರತೀಯ ಕವಿ

A) ಬಂಕಿಮಚಂದ್ರ B) ಹರಿನಾರಾಯಣ ಆಪ್ಟೆ

C) ಪ್ರೇಮಚಂದ್ರ D) ರವೀಂದ್ರನಾಥ ಠಾಗೂರ್

120. "...ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ" ಈ ಮಾತು ಬರುವ ಕೃತಿ

A) ಯಶೋಧರ ಚರಿತೆ B) ರಾಮನಾಥ ಚರಿತೆ

C) ರಾಮಧಾನ್ಯ ಚರಿತೆ D) ನಳಚರಿತೆ

**************